ಶಿವ. ಕಟ್ಟುಮಸ್ತಾಗಿದ್ದ. ಈ ಚಾಕರಿಗೆ ಸೇರಿ ವರ್ಷವೊಪ್ಪತ್ತಾಗಿತ್ತು. ಅವನು ಚೀಟಿಯಲ್ಲಿ ಗುರುತು ಮಾಡಿಕೊಂಡಿದ್ದ ಲೇವಾದೇವಿಯ ಲೆಕ್ಕ ಕೂಡಿಸುತ್ತಿದ್ದ. ಶಿವ ಎದುರು ಬಂದು ನಿಂತ ಇವನ ಕಡೆ ಕತ್ತೆತ್ತಿ ಏನು ಎಂಬಂತೆ ಹುಬ್ಬು ಕುಣಿಸಿದ. ಈ ಮಂದಿಗೆ ಸಿಟ್ಟು ಯಾವಾಗ ಬರುತ್ತೆ, ಸಮಾಧಾನ ಯಾವಾಗ ಇರುತ್ತೆ, ಭಾವುಣಿಕೆ ಯಾವಾಗ ಮೂಡುತ್ತೆ ಒಂದೂ ತಿಳಿಯಲೊಲ್ಲದು. ಆದರೂ ಮಾದೇವ ಉತ್ಸಾಹದಿಂದಲೇ 'ಕಸ ತುಂಬ್ಕೊಂಡು ಬಂದಿದ್ದೀವಿ ಕನಣ್ಣ. ಆದ್ರೆ ಲಾರಿಗಳು ಇನ್ನೂ ಬಂದಿಲ್ಲ; ಮೇಸ್ತ್ರಣ್ಣನೂ ಬಂದಿಲ್ಲ. ಇನ್ನೂ ಲೇಟಾ' ಕೇಳಿದ.

ಶಿವ ಒರಟು ಪ್ಯಾಂಟಿನ ಜೇಬಿಗೆ ಲೆಕ್ಕದ ಚೀಟಿಯನ್ನು ಮಡಚಿ ಹಾಕಿಕೊಂಡು ಮಾದೇವನ ಮಾತಿಗೆ ನಿಗಾ ಕೊಡದೆ, 'ನಿನ್ನ ಹೆಸರೇನು? ಎಲ್ಲಿಂದ ಬಂದೆ? ನಿಂದ್ಯಾವೂರು? ಈ ಕೆಲಸಕ್ಕೆ ಸೇರಿ ಎಷ್ಟು ದಿನವಾಯ್ತು? ಕೈಗೆ ಎಷ್ಟು ಕೊಡ್ತಾರೆ? ನಿನ್ನ ವಾಸ? ನಿನ್ನ ಡ್ರೈವರು ಆ ನಾಗಲಿಂಗಸ್ವಾಮಿಯಾ? ಆತ ಹೆಂಗೆ? ಆಂ...' ಮಾದೇವನ ಪೂರ್ವಾಪರ ತಿಳಿದುಕೊಳ್ಳುವ ಆಸ್ಥೆ ತೋರಿದ.

ಮಾದೇವನಿಗೆ ಇಷ್ಟು ಸಾಕಾಯಿತು. ಮನಸ್ಸು ತುಂಬಿ ಬಂತು. ಈ ಕೆಲಸ ಕೈಹಿಡಿದು ಮೂರು ತಿಂಗಳಾಗಿತ್ತು. ಆಟೋದವರಾಗಲೀ, ಕಸ ತುಂಬುವವರಾಗಲೀ, ಡಂಪಿಂಗ್ ಲಾರಿಯವರಾಗಲೀ, ನೀನು ಯಾರು ಎತ್ತ ಎಂದು ಕೇಳಿರಲಿಲ್ಲ. ಆ ಮೇಸ್ತ್ರಿಯಂತೂ ಕಂಡೇ ಇಲ್ಲ. ಅಷ್ಟೇಯಾಕೆ ಆಟೋಗುಂಟೆ ಒಡನಾಡುವ ಡ್ರೈವರ್ ನಾಗಲಿಂಗಣ್ಣನ ಸಲುಗೆ ಸಂಬಂಧವೂ ಸಿಕ್ಕಿರಲಿಲ್ಲ. ಅವನು ಬೇಕಾದಾಗ ಬೀಡಿ, ಬೆಂಕಿಪೊಟ್ಟಣ ತರಿಸಿಕೊಳ್ಳುತ್ತಿದ್ದ. ಮಿಕ್ಕ ಚಿಲ್ಲರೆಯನ್ನು ಕೇವಲ ಬೆರಳುತುದಿ ಕುಣಿಸಿ ಹಿಂಪಡೆಯುತ್ತಿದ್ದ. ತಿಂಗಳ ತನ್ನ ಕೂಲಿ ಕೇಳಿದರೆ ಮೇಸ್ತ್ರಿ ಕಡೆ ಕೈ ತೋರಿಸುತ್ತಿದ್ದ. 'ಈ ಆಟೋ ಕೂಡ ಮೇಸ್ತ್ರಿಯದು. ನಾನಿದಕ್ಕೆ ಡ್ರೈವರ್ ಅಷ್ಟೇಯಾ' ಅಂದಿದ್ದ. ಅವನು ಇಷ್ಟು ಹೇಳಿದ್ದೇ ಹೆಚ್ಚು. ಹೊಸಬರ ಕಂಡರೆ ನೂರೊಂದು ವಿಚಾರಿಸುವಂಥ ತನ್ನ ಜಾಯಮಾನಕ್ಕೆ ಮೊದಮೊದಲು ಇದೊಂದು ವಿಚಿತ್ರವೂ ವಿಸ್ಮಯವೂ ಆಗಿತ್ತು.

ಮಾದೇವನಿಗೆ ಶಿವ ಸಿಕ್ಕಿದ್ದು ಆತಂಕದ ಮನಸ್ಸಿಗೆ ತಣ್ಣನೆ ಗಾಳಿ ಬೀಸಿದಂತಾಯಿತು. ಕೈಗೆ ಅಂಟಿಕೊಂಡಿದ್ದ ಕಸದ ಮುಸುರೆಯನ್ನು ಉಜ್ಜಿ ಉದರಿಸುತ್ತಾ ಈಗ ಪರಿಹಾರ ಪಡೆಯಬೇಕೆಂಬ ಉತ್ಸುಕದಲ್ಲಿ ಹೇಳಿಕೊಳ್ಳತೊಡಗಿದ:

ಮಾದೇವ ಊರುಬಿಟ್ಟು ಆಗಲೇ ಮೂರು ತಿಂಗಳ ಮೇಲಾಗಿತ್ತು. ದೊಡ್ಡ ವಹಿವಾಟಿನ ಮರಿದ್ಯಾವೇಗೌಡರ ಹೊಲಮನೆ ಕೆಲಸ ಆಗಾಗ ಮಾಡುತ್ತಿದ್ದರೂ ಅದು ಹೊಟ್ಟೆಬಟ್ಟೆಗೆ ಸಮನಾಗುತ್ತಿತ್ತು. ಕಷ್ಟಕಾರ್ಪಣ್ಯಗಳಿಗೆ ಉಳಿಸಿಡುವಷ್ಟು ಸಂಪಾದನೆ ಇರಲಿಲ್ಲ. ಆಗಾಗ ಅವ್ವ ಹೊಟ್ಟೆನೋವೆಂದು ನರಳಾಡುವಾಗ ದಿಕ್ಕು ತೋಚದಂತಾಗುತ್ತಿತ್ತು. ಪಕ್ಕದ ಸಾಲಿಗ್ರಾಮದ ಆಸ್ಪತ್ರೆಗೆ ಹೋಗಿ ತೋರಿಸಿದಾಗ ಹೊಟ್ಟೆಯೊಳಗೆ ಚಿಕ್ಕ ಗೆಡ್ಡೆ ಬೆಳೆದಿರಬೇಕು. ನೀನು ಮೈಸೂರಿನ ದೊಡ್ಡಾಸ್ಪತ್ರೆಗೆ ಕರೆದುಕೊಂಡು ಹೋಗು ಅಂತ ಹೇಳಿದ್ದರು. ಅದನ್ನು ಕೇಳಿ ಹಣಕ್ಕಾಗಿ ಅಧೀರನಾಗಿದ್ದ.

